# ಶಾಲಾ ಮತ್ತು ತರಗತಿ ವಾತಾವರಣ - ಪರಿಕಲ್ಪನಾ ಟಿಪ್ಪಣಿ

ಶಾಲೆ ಎ೦ದರೆ ಏನು ? , ಶಾಲೆ ಹೇಗೆ ಇರಬೇಕು ಮತ್ತು ಶಾಲೆಯಿಂದ ನಾವು ಏನನ್ನು ನೀರೀಕ್ಷೀಸುತ್ತೇವೆ ? ಇವು ಮೇಲ್ನೋಟಕ್ಕೆ ತುಂಬಾ ಸರಳ ಅನಿಸಿದರೂ ಶಿಕ್ಷಣ ಮತ್ತು ಅದರ ಪ್ರಕ್ರಿಯೆಯಲ್ಲಿ ಈ ಮೇಲಿನ ಮೂಲಭೂತ ಪ್ರಶ್ನೆಗಳು ಎ೦ಬುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ . ಈ ಪ್ರಶ್ನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಶಿಕ್ಷಣದ ಪ್ರಕ್ರಿಯೆಯನ್ನು ಗಮನಿಸಿದಾಗ ಈ ವ್ಯವಸ್ಥೆ ಎಷ್ಟೊಂದು ಚಲನಶೀಲವಾದದ್ದು ಮತ್ತು ನಮ್ಮ ಜನಜೀವನವನ್ನು ರೂಪಿಸುವಲ್ಲಿ ಇದರ ಪಾತ್ರ ಎಷ್ಟು ಮಹತ್ವದ್ದು ಎ೦ಬುದು ನಮ್ಮ ಅರಿವಿಗೆ ಬರುತ್ತದೆ. ನಮ್ಮದು ಪ್ರಜಾಸತಾತ್ಮಕ ನೆಲೆಯಲ್ಲಿ ರೂಪುಗೊಳ್ಳುತ್ತಿರುವ ಒಂದು ನಾಗರಿಕ ಸಮಾಜ ಮತ್ತು ಇಲ್ಲಿರುವ ಮಕ್ಕಳು ನಮ್ಮ ದೇಶದ ಪ್ರಜ್ಞಾವಂತ ಪ್ರಜೆಗಳಾಗಬೇಕಾದ ಆಶಯವಾಗಿದೆ. ಇದನ್ನು ನಮ್ಮ ಗಮನದಲ್ಲಿಟ್ಟುಕೊಂಡು ನಾವು ನಮ್ಮ ಭವಿಷ್ಯತ್ತಿನ ಆಧಾರ ಸ್ಥಂಭಗಳಾದ ಮಕ್ಕಳಿಗೆ 'ಶಾಲೆ' ಯಾವ ರೀತಿ ಪರಿಸರವನ್ನು ಒದಗಿಸಬೇಕು ಎ೦ಬುದರ ಆಧಾರದ ಮೇಲೆ ನಮ್ಮ ಸಮಾಜದ ಏಳಿಗೆಯನ್ನು , ಅದರ ಆರೋಗ್ಯವನ್ನು ನಿರೀಕ್ಷಿಸಬಹುದು.

ಶಾಲೆಗೆ ದಾಖಲಾದ ಮಗು, ಶಾಲೆಗೆ ಹೋಗುವುದನ್ನು ಎದುರು ನೋಡುತ್ತದೆಯೇ ಎ೦ಬುದರ ಮೇಲೆ ಮಗುವಿಗೆ ಶಾಲೆ ಆಕರ್ಷಣೀಯವಾಗಿದೆಯೇ ಇಲ್ಲವೇ ಎ೦ಬುದನ್ನು ನಾವು ಗುರುತಿಸಬಹುದಲ್ಲವೆ? ಇದನ್ನು ಹೇಳುವ ಸಂಧರ್ಭದಲ್ಲಿ ಶಿಕ್ಷಣಾಶಕ್ತರಲ್ಲಿ ಸಾಕಷ್ಟು ಸಂಚಲನವುಂಟು ಮಾಡಿರುವ 'ತೊತ್ತೋಜಾನ್ - ಕಿಟಕಿಯ ಪಕ್ಕದ ಪುಟ್ಟ ಹುಡುಗಿ ಕೃತಿಯನ್ನು ನೆನಪಿಸಿಕೊಳ್ಳಬಹುದು. ಈ ಕೃತಿಯಲ್ಲಿ ತೊತ್ತೋಜಾನ್ ಎ೦ಬ ಪುಟ್ಟ ತುಂಟ ಹುಡುಗಿ "ತೊಮೆಯ" ಕಿರಿಯ ಶಾಲೆಯಲ್ಲಿ ದಾಖಲಾಗುತ್ತಾಳೆ .ಅಲ್ಲಿಗೆ ಬಂದೊಡನೆ ಅವಳನ್ನು ಅಲ್ಲಿ ಆಕರ್ಷಿಸುವುದು - ಆ ಶಾಲೆಯ ಪರಿಸರ ಮತ್ತು ಅಲ್ಲಿಯ ಶಿಕ್ಷಕರ ಸ್ವಭಾವ. ತೊಮೆಯ ಶಾಲೆಯಲ್ಲಿ ಮಕ್ಕಳ ಕಲಿಕೆಗೆ, ಅವರ ಸಹಜವಾದ ಕುತೂಹಲಭರಿತ ಮನಸ್ಸುಗಳಿಗೆ ಪ್ರಚೋದನೆ ಒದಗಿಸುವ ಪರಿಸರ ನಮಗೆ ಅಲ್ಲಿ ಎಲ್ಲೆಲ್ಲೂ ಕಾಣಲು ಸಿಗುತ್ತದೆ . ರೈಲು ಬಂಡಿ ಕೊಠಡಿಗಳು, ಶಿಕ್ಷಕರಿಗೆ ಮಕ್ಕಳ ಬಗ್ಗೆ ಇದ್ದ ಆಸ್ಥೆ ಇವೆಲ್ಲವೂ ಶಾಲೆಯ ಭೌದ್ದಿಕ , ಭೌತಿಕ ಮತ್ತು ಮನೋಸಾಮಾಜಿಕ ಪರಿಸರ ಹೇಗಿರಬೇಕು ಎ೦ಬುದಕ್ಕೆ ಮಾದರಿಯಾಗಿ ಕಾಣಿಸುತ್ತದೆ. ಆದರೆ ಶಾಲೆಯ ಪರಿಸರವನ್ನಷ್ಟೇ ಸುಂದರಗೊಳಿಸಿದರೆ ಸಾಲದು ; ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಯು ಮಗುವನ್ನು ಕೇಂದ್ರ ವಾಗಿಟ್ಟುಕೊಂಡು - ಶಾಲೆ ಇರುವುದು ಮಗುವಿಗಾಗಿ ಎ೦ಬ ನೆಲೆಯಲ್ಲಿ , ಇಲ್ಲಿ ನಡೆಯುವ ಎಲ್ಲಾ ಪ್ರಕ್ರಿಯೆಗಳಲ್ಲೂ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಮಕ್ಕಳನ್ನು ತೊಡಗಿಸಿಕೊಂಡು ಅರ್ಥಪೂರ್ಣ ಕಲಿಕಾ ವಾತಾವರಣವನ್ನು ನಾವು ಸಾಧ್ಯ ಮಾಡಬೇಕು .

ಶಾಲೆಯ ಪರಿಸರ , ಕಲಿಕೆಗೆ ಸ೦ಬಂದಪಟ್ಟಂತೆ , 'ಶಾಲೆ'- ಎ೦ಬ ವ್ಯಾಪ್ತಿಯೊಳಗೆ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಒಪ್ಪಂದದಲ್ಲಿ ಕಾಯ್ದಿಡುವ ಒಂದು ಬಂಧ. ಈ ಬಂಧ ನಮಗೆ ಕೆಲವೊಮ್ಮೆ ಕಣ್ಣಿಗೆ ಕಾಣಿಸಿದರೆ , ಕೆಲವೊಮ್ಮೆ ಅಗೋಚರವಾಗಿರುತ್ತದೆ. ಆದರೆ ಕಲಿಕೆಯ ಪ್ರಕ್ರಿಯೆಯ ಮೇಲೆ ಇದರ ಪರಿಣಾಮ ಮಾತ್ರ ನಿಚ್ಚಳ ವಾಗಿರುತ್ತದೆ ಶಾಲೆಯ ಪರಿಸರವನ್ನು ನಾವೂ ಮೂರು ನೆಲೆಗಟ್ಟಿನಲ್ಲಿ ಗುರುತಿಸಬಹುದು ಅವುಗಳೆಂದರೆ:-

1. ಭೌತಿಕ ಪರಿಸರ ,
2. ಬೌದ್ಧಿಕ ಪರಿಸರ ಮತ್ತು
3. ಮನೋಸಾಮಾಜಿಕ ಪರಿಸರ .

ಪ್ರತ್ಯಕ್ಷವಾಗಿ ಕಾಣುವ ಸಂಪನ್ಮೂಲಗಳಾದ ಆಟದ ಬಯಲು , ಸುರಕ್ಷಾ ಗೋಡೆ , ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಗ್ರಂಥಾಲಯ ಇತ್ಯಾದಿಗಳ ಜೊತೆಗೆ ಶಾಲಾ ಪರಿಸರದಲ್ಲಿರುವ ಶಬ್ದದ ಪ್ರಮಾಣ ತಾಪಮಾನ, ಭೌಗೋಳಿಕ, ಜೈವಿಕ ಮತ್ತು ರಾಸಾಯನಿಕ ಅಂಶಗಳನ್ನು **"ಭೌತಿಕ ಪರಿಸರ"** ಒಳಗೊಳ್ಳುತ್ತದೆ. ಶಾಲೆಯ ಬೋಧನೆ ಮತ್ತು ಕಲಿಕಾ ವಿಧಾನ ಹಾಗು ವಿಷಯ ವಸ್ತುಗಳ ಆಯ್ಕೆ, ಆಯ್ಕೆಯಲ್ಲಿನ ಸ್ವಾತಂತ್ರ್ಯ "**ಶಾಲೆಯ ಭೌದ್ಧಿಕ ಪರಿಸರ**"ವನ್ನು ನಿರೂಪಿಸುತ್ತದೆ. "**ಶಾಲೆಯ ಮನೋಸಾಮಾಜಿಕ ಪರಿಸರ**"ವನ್ನು ನಿರ್ದೇಶಿಸುವ ಅಂಶಗಳೆಂದರೆ: ಶಾಲೆಯ ಭಾಗವಾಗಿರುವ ವಿಧ್ಯಾರ್ಥಿಗಳ, ಶಿಕ್ಷಕರ ಮತ್ತು ಇತರೆ ಭಾಗಿದಾರರ ಮನೋಪ್ರವೃತ್ತಿಗಳು, ಭಾವನೆಗಳು ಮತ್ತು ಮೌಲ್ಯಗಳು. ಇದರ ಜೊತೆಗೆ ಭೌತಿಕ ಮತ್ತು ಮಾನಸಿಕ ಸುರಕ್ಷಾ ಭಾವನೆ, ಪರಸ್ಪರ ಧನಾತ್ಮಕ ಸಂಬಂಧಗಳು, ಪರಸ್ಪರ ಅಗತ್ಯಗಳ ಮತ್ತು ಸಾಧನಾ ಸಾಮರ್ಥ್ಯಗಳ ಅರಿವು, ಕಲಿಕೆಗೆ ಪೂರಕವಾದ ಬೆಂಬಲ ಎಲ್ಲವೂ ಶಾಲೆಯ ಮನೋಸಾಮಾಜಿಕ ಪರಿಸರವನ್ನು ನಿರೂಪಿಸುತ್ತದೆ [ತೋತೋ ಚಾನ್ ನ ತೊಮೆಯ ಶಾಲೆಯ ಮುಖ್ಯಶಿಕ್ಷಕರು ತೊತೊಚಾನ್ ಳನ್ನು ಕಂಡಾಗಲೆಲ್ಲಾ ನೀನು ನಿಜವಾಗಿಯೂ ಒಳ್ಳೆ ಹುಡುಗಿ ಎಂದು ಹೇಳುತ್ತಾ ಅವಳಲ್ಲಿ ಬೆಳೆಸಿದ ಸದ್ಭಾವ ಅದರಿಂದ ಅವಳಲ್ಲಿ ಆದ ಬದಲಾವಣೆಗಳು]. ಶಾಲಾ ಪರಿಸರ ಧನಾತ್ಮಕವಾಗಿ ಮಕ್ಕಳಲ್ಲಿ ಅವರ ಸಾಮರ್ಥ್ಯದ ಬಗ್ಗೆ , ಅವರಲ್ಲಿ ಮಿಳಿತವಾಗಿರುವ ಒಳ್ಳೆತನದ ಬಗ್ಗೆ ಹೇಗೆ ಜಾಗೃತಿಯನ್ನು ಮೊಡಿಸಬಲ್ಲದು ಎಂಬುದನ್ನು ತೋರಿಸುತ್ತದೆ. ಸುರಕ್ಷಿತ ಭಾವನೆ ಕೊಡುವ, ಸುಸಜ್ಜಿತ ಮತ್ತು ಸ್ವಚ್ಛ ಶಾಲೆ, ಜೊತೆಯಲ್ಲಿರುವ ಶಿಕ್ಷಕರ ಮತ್ತು ವಿಧ್ಯಾರ್ಥಿಗಳ ನಡುವಿನ ಒಂದು ಪ್ರೋತ್ಸಾಹದಾಯಕ ಮನೋಸಾಮಾಜಿಕ ವಾತಾವರಣ ಮತ್ತು ಇದರಿಂದ ರೂಪಿತವಾಗುವ ಒಂದು ಸುಸಂಸ್ಕೃತಿ ಮತ್ತು ಸುಸಂಬದ್ಧತೆ ಶಿಕ್ಷಣದ ಎಲ್ಲ ಭಾಗಿದಾರರ ಹಿತಾಶಕ್ತಿಯನ್ನು ಕಾಪಾಡಿ, ಉತ್ತಮ ಸಮಾಜದ ನಿರ್ಮಾಣಕ್ಕಾಗಿ ವೇದಿಕೆಯನ್ನು ಸಜ್ಜುಗೊಳಿಸುತ್ತದೆ.

## ಶಾಲಾ ಭೌತಿಕ ಪರಿಸರ

ಮಕ್ಕಳು ಪ್ರಪಂಚವನ್ನು ಬಹುಇಂದ್ರಿಯಗಳ ಮುಖಾಂತರ ಗ್ರಹಿಸುತ್ತಾರೆ ವಿಶೇಷವಾಗಿ ದೃಶ್ಯ ಮತ್ತು ಸ್ಪರ್ಶೇಂದ್ರಿಯಗಳ ಮುಂಖಾತರ . ಒಂದು ಮುಮ್ಮುಖಗಳುಳ್ಳ ಸ್ಥಳಾವಕಾಶ ಮಗುವಿನ ಕಲಿಕೆ ವಿಶಿಷ್ಟ ಪರಿಸರವನ್ನು ಒದಗಿಸಬಹುದು. ಏಕೆಂದರೆ ಪಠ್ಯ ಪುಸ್ತಕ ಮತ್ತು ಕರಿಹಲಗೆಯ ಜೊತೆಗೆ ಬಹು ಇಂದ್ರಿಯಗಳ ಅನುಭವವನ್ನು ಇದು ಒದಗಿಸುತ್ತದೆ. ಸ್ಥಳದ ರಚನೆ, ಆಕಾರ, ಕೋನಗಳ , ಚಲನವಲನಗಳು ಮತ್ತು ಸ್ಥಳವನ್ನು ಕುರಿತ ವೈಶಿಷ್ಟಗಳು , ಉದಾಹರಣೆಗೆ ಹೊರಗೆ ಒಳಗೆ , ಸಮರೂಪತೆ, ಮೇಲೆ ಕೆಳಗೆ , ಇತ್ಯಾದಿ ಅಂಶಗಳನ್ನು , ಭಾಷೆ , ವಿಜ್ಞಾನ, ಗಣಿತ ಮತ್ತು ಪರಿಸರ ಇವೇ ಮುಂತಾದ ವಿಷಯಗಳ ಪರಿಕಲ್ಪನೆಗಳನ್ನು ಕಲಿಸಲು ಬಳಸಿಕೊಳ್ಳಬಹುದು. ಈ ಪರಿಕರಗಳನ್ನು ಈಗಿರುವ ಅಥವಾ ಮುಂದೆ ಆಗುವ ಕಟ್ಟಡಗಳಲ್ಲಿ ಬಳಸಿಕೊಳ್ಳ ಬಹುದು.

**ತರಗತಿಯ ಜಾಗ**: ಕಿಟಕಿಗಳಲ್ಲಿ ಹಾಕಿರುವ ಗ್ರಿಲ್ ಗಳನ್ನು ಮಕ್ಕಳ ಬರಹ ಪೂರ್ವ ಆಕಾರಗಳ ಅಭ್ಯಾಸಕ್ಕೆ ಅಥವಾ ಭಿನ್ನ ರಾಶಿಗಳ ಕಲಿಕೆಗೆ ಸೂಕ್ತವಾಗುವಂತೆ ವಿನ್ಯಾಸಗೊಳಿಸಬಹುದು. ಬಾಗಿಲಿನ ಕೆಳಗೆ ನೆಲದ ಮೇಲೆ ವಿವಿಧ ಬಗೆಯ ಕೋನಗಳನ್ನು ಗುರುತು ಹಾಕಿ ಇದನ್ನು ಕೋನಗಳ ಪರಿಕಲ್ಪನೆಯನ್ನು ವಿವರಿಸಲು ಬಳಸಿಕೊಳ್ಳ ಬಹದು;ಅಥವಾ ತರಗತಿಯಲ್ಲಿರುವ ಕಪಾಟನ್ನು ಗ್ರಂಥಾಲಯಕ್ಕೆ ಅನುಕೂಲವಾಗುವಂತೆ ಮಾರ್ಪಾಡು ಮಾಡಬಹುದು; ಛಾವಣಿಗೆ ನೇತು ಹಾಕಿರುವ ಫ್ಯಾನನ್ನು ವಿವಿಧ ಬಣ್ಣಗಳಿಂದ ಅಲಂಕರಿಸಿ ಅತಿ ವೇಗವಾಗಿ ಬದಲಾಗುವ ಬಣ್ಣಗಳ ರಂಜನೀಯ ರಚನೆಗಳನ್ನು ಉಂಟುಮಾಡಬಹದು. ಅರೆತೆರೆದ ಜಾಗ ಅಥವಾ ಹೊರಾಂಗಣ ; ಶಾಲೆಯ ಹೊರಗಿನ ಧ್ವಜ ಸ್ತಂಭದ ಚಲನಶೀಲ ನೆರಳು ವಿವಿಧ ಕಾಲವನ್ನು ಅಳೆಯುವ ಸಾಧನವಾಗಬಲ್ಲುದು. ಚಳಿಗಾಲದಲ್ಲಿ ಎಲೆ ಉದುರುವ

ಮರವನ್ನು ನಡೆವುದರಿಂದ ಬೇಸಿಗೆಯಲ್ಲಿ ಹಸಿರಿರುವುದರಿಂದ ನೆಮ್ಮದಿಯ ಕಲಿಕೆಯ ತಾಣವಾಗಬಲ್ಲುದು. ಹಳೆಯ ಟೈರುಗಳನ್ನು ಉಪಯೋಗಿಸಿ ಸಾಹಸಪೂರ್ಣ ಆಟದ ಮೈದಾನವನ್ನಾಗಿಸಬಹುದು . ಅದಕ್ಕೆ ಪ್ರತಿಯಾಗಿರುವ ಜಾಗವನ್ನು ಬಸ್ಸು ರೈಲುಗಾಡಿ ಅಂಚೆ ಕಚೇರಿ , ಅಂಗಡಿ ಮುಂತಾದವುಗಳನ್ನು ಮಾಡಬಹುದು. ಮಣ್ಣು ಮರಗಳನ್ನು ಉಪಯೋಗಿಸಿ ಇಟ್ಟಿಗೆಯಿಂದ ಇಂಡಿಯಾ ಭೂಪಟ ಮಾಡಿ ಕಣಿವೆಗಳನ್ನು ಸೃಷ್ಟಿಸಬಹುದು ಹಾಗು ಅಲ್ಲಿ ಔಷದಿಯ ಸಸ್ಯಗಳನ್ನು ಬೆಳೆಸಬಹುದು ಜೊತೆಗೆ ಮಳೆಕೊಯ್ಲನ್ನು ಮಾಡಿಸಬಹುದು.

ಶಾಲೆಯಲ್ಲಿರುವ ಕಟ್ಟಡಗಳು ಅಲ್ಲಿರುವ ಬೆಲೆಬಾಳುವ ಭೌತಿಕ ಆಸ್ತಿ . ಅತ್ಯಂತ ಹೆಚ್ಚಿನ ಶೈಕ್ಷಣಿಕ ಮೌಲ್ಯವನ್ನು ಅವುಗಳಿಂದ ಪಡೆಯಬೇಕು . ಹಳೆಯ ಕಟ್ಟಡಗಳನ್ನು ದುರಸ್ತಿಗೊಳಿಸುವದರಿಂದ ಅಥವಾ ಈಗಿರುವ ಶಾಲೆಗಳನ್ನು ಉನ್ನತ ಮಟ್ಟಕ್ಕೆ ಏರಿಸುವುದರಿಂದ ಅಥವಾ ಹೊಸ ಕಟ್ಟಡಗಳನ್ನು ಕಟ್ಟಿಸುವುದರಿಂದ ಇದು ಒಂದು ಬಗೆಯಲ್ಲಿ ಸಾಧ್ಯವಾಗುದಾದರೆ ಸೃಜನಾತ್ಮಕ ಮತ್ತು ಪ್ರಯೋಗಿಕ ಪರಿಹಾರಗಳ ಮುಂಖಾತರ ಕಟ್ಟಡಗಳ ಶೈಕ್ಷಣಿಕ ಮೌಲ್ಯವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಬಹುದು. ಗೋಡೆಗಳ ಮೇಲಿನ ಹೆಚ್ಚು ಸ್ಥಳವನ್ನು ಮಕ್ಕಳೇ ರಚಿಸಿದ ಚಿತ್ರಗಳಿಗೆ ಅಥವಾ ಶಿಕ್ಷಕರು ರಚಿಸಿದ ಗೋಡೆ ಪಟಗಳಿಗೆ ಮೀಸಲಿಡಬೇಕು. ಇದನ್ನು ತಿಂಗಳಿಗೊಮ್ಮೆಯಾದರು ಬದಲಾಯಿಸಬೇಕು. ಈ ಬಗೆಯ ಚಿತ್ರ ಪಟಗಳನ್ನು ರಚಿಸುವುದು ಮತ್ತು ಅವುಗಳನ್ನು ಗೋಡೇಗಳ ಮೇಲೆ ಅಂಟಿಸುವುದು ಮಕ್ಕಳಿಗೆ ಅಮೂಲ್ಯವಾದ ಕಲಿಕಾ ಅನುಭವವನ್ನು ಒದಗಿಸುವುದು.

**ಭೌತಿಕ ವಾತಾವರಣದ ಮಹತ್ವ**

ಮಕ್ಕಳಲ್ಲಿ ಜ್ಞಾನ ಬಹುಕಾಲ ಉಳಿಯಲು ಮತ್ತು ತನ್ನ ದೈಂನಂದಿನ ಚಟುವಟಿಕೆಯಲ್ಲಿ ಅನ್ವಯಿಸಿ ವೈಚಾರಿಕ ಪ್ರಜ್ಞೆಯಿಂದ ಹೆಚ್ಚಿನ ಜ್ಞಾನ ಪಡೆಯುವಲ್ಲಿ ಪ್ರಯೋಗಾತ್ಮಕವಾಗಿ ಮತ್ತು ನಾವಿನ್ಯಯುತ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಲು ಭೌತಿಕ ಪರಿಸರವು ಮಕ್ಕಳ ಜ್ಞಾನ ಕಟ್ಟುವಲ್ಲಿ ಮಹತ್ತರ ಪಾತ್ರವಹಿಸುತ್ತದೆ

**ಸಂಪನ್ಮೂಲಗಳನ್ನು ಕ್ರೋಢಿಕರಿಸುವುದು ಮತ್ತು ವ್ಯವಸ್ಥೆ ಮಾಡುವುದು**

ಭೋದನ ಸಾಧನಗಳು ಮತ್ತಿತರ ವಸ್ತುಗಳು , ಪುಸ್ತಕಗಳು , ಆಟಿಕೆಗಳು , ಆಟಗಳು ಇವೆಲ್ಲ ಮಕ್ಕಳ ಕಲಿಕೆಗೆ ಆಸಕ್ತಿವುಂಟು ಮಾಡುತ್ತವೆ. ಸ್ಥಳೀಯವಾಗಿ ತಯಾರಿಸಿದ ವಸ್ತುಗಳನ್ನು ಭೋಧನ ಸಾಮಾಗ್ರಿಗಳಾಗಿ ಬಳಸಿಕೊಳ್ಳಬಹುದು. ಆದರಲ್ಲಿ ಪ್ರಾಥಮಿಕ ತರಗತಿಗಳಲ್ಲಿ ಅಧ್ಯಾಪಕರುಗಳು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಪಡಿಸಬಹುದಾದ ಕಚ್ಚಾವಸ್ತುಗಳನ್ನು ಭೋಧನ ಸಾಮಾಗ್ರಿಯಾಗಿ ತಯಾರಿಸಬಹುದು.ಇದರಿಂದ ಅವರು ತಯಾರಿಕೆಯಲ್ಲಿ ತೊಡಗುವ ವೇಳೆಯನ್ನು ಸಾರ್ಥಕವಾಗಿ ಉಪಯೋಗಿಸಿಕೊಳ್ಳ ಬಹುದು. ಸ್ಪೈರೋ ಫೋಮ್, ಕಾರ್ಡ್ ಬೋರ್ಡ್ ಗಳು ಗಟ್ಟಿ ಯಾಗಿ ಇರುವುದಿಲ್ಲ , ಆಕರ್ಷಣೀಯವಾಗಿಯೂ ಇರುವುದಿಲ್ಲ , ರೆಕ್ಸಿನ್, ರಬ್ಬರ್ ಮತ್ತು ಬಟ್ಟೆಗಳು ಇವುಗಳಿಗೆ ಒಳ್ಳೆಯ ಪರ್ಯಾಯಗಳು, ಭೂಪಟಗಳು, ಚಿತ್ರ ಮಡಿಕೆಗಳು, ಗೊತ್ತಾದ ಸಾಧನಗಳು.... ಮುಂತಾದ ಸಂಪನ್ಮೂಲಗಳನ್ನು ಸಮುಚ್ಚಯ ಕೇಂದ್ರಗಳಿಂದ ಬದಲಾಯಿಸಿಕೊಳ್ಳಬಹುದು.

*******************************